ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:	966
ಮಾನ್ಯ ಸದಸ್ಯರ ಹೆಸರು:	ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ:	15.03.2021
ಉತ್ತರಿಸುವ ಸಚಿವರು:	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

1. ಕೋವಿಡ್–19 ಸಂದರ್ಭದಲ್ಲಿ ಕೊರೋನಾ ವಾರಿಯರ್ಸ್‌ಗಳು ಮೃತರಾದ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ರೂ 30 ಲಕ್ಷಗಳ ಪರಿಹಾರವನ್ನು ಸರ್ಕಾರ ಘೋಷಿಸಿರುವುದು ನಿಜವೇ?	ಹೌದು
2. ಹಾಗಿದ್ದಲ್ಲಿ, ಮೃತರಾದ ಎಷ್ಟು ಜನ ಕೊರೋನಾ ವಾರಿಯರ್ಸ್‌ಗಳಿಗೆ ರೂ 30 ಲಕ್ಷಗಳ ಪರಿಹಾರ ಮೊತ್ತವನ್ನು ನೀಡಲಾಗಿದೆ ಮತ್ತು ಬಾಕಿ ಉಳಿಸಿಕೊಂಡಿದೆ (ಜಿಲ್ಲಾವಾರು ಮಾಹಿತಿ ನೀಡುವುದು)	ಕರ್ನಾಟಕ ಸರ್ಕಾರದ ಆದೇಶದನ್ವಯ ರೂ 30 ಲಕ್ಷಗಳ ಪರಿಹಾರ ಕೋರಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸ್ವೀಕೃತಗೊಂಡಿರುವ ಪ್ರಸ್ತಾವನೆಗಳಿಗೆ ಇದುವರೆವಿಗೂ ಪರಿಹಾರವನ್ನು ನೀಡಿರುವುದಿಲ್ಲ. ಆದರೆ ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿಯಲ್ಲಿ ಕೊರೋನ ಸೋಂಕಿನಿಂದ ಮೃತಪಟ್ಟ ಕೊರೋನಾ (Frontline Health worker) ವಾರಿಯರ್ಸ್ ಗಳಿಗೆ ರೂ.50 ಲಕ್ಷ ವಿಮಾ ಸೌಲಭ್ಯವನ್ನು ಮಂಜೂರು ಮಾಡಲು ಅವಕಾಶವಿದ್ದು, ಅದರಂತೆ 25 ಮೃತ ಕೊರೋನಾ ವಾರಿಯರ್ಸ್ ಕುಟುಂಬದ ವಾರಸುದಾರರಿಗೆ ತಲಾ ರೂ.50 ಲಕ್ಷಗಳಂತೆ 12.5 ಕೋಟಿ ರೂಗಳನ್ನು ವಿತರಿಸಲಾಗಿದೆ. **(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿರಿಸಿದೆ)**
3. ಬಾಕಿ ಉಳಿಸಿಕೊಂಡಿರುವುದಕ್ಕೆ ಕಾರಣಗಳೇನು; ಬಾಕಿ ಉಳಿಸಿಕೊಂಡಿರುವವರಿಗೆ ಪರಿಹಾರ ಧನ ವಿತರಿಸಲು ಕೈಗೊಂಡ ಕ್ರಮಗಳೇನು?	• ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಕರ್ನಾಟಕ ಸರ್ಕಾರದ ಆದೇಶದನ್ವಯ 30 ಲಕ್ಷಗಳ ಪರಿಹಾರ ಸಂದಾಯ ಮಾಡುವ ಬದಲಾಗಿ ಕೇಂದ್ರ ಸರ್ಕಾರದಿಂದ ರೂ.50 ಲಕ್ಷಗಳ ಪರಿಹಾರ ಮೊತ್ತವನ್ನು ಕ್ಲೇಮು ಮಾಡಲು ಆದ್ಯತೆ ನೀಡಲಾಗಿದ್ದು, ಇದುವರೆವಿಗೂ 129 ಪ್ರಸ್ತಾವನೆಗಳು ಸ್ವೀಕೃತಗೊಂಡಿದ್ದು ಇದರಲ್ಲಿ 77 ಪ್ರಕರಣಗಳನ್ನು ನ್ಯೂ ಇಂಡಿಯಾ ಅಶುರೆನ್ಸ್ ಕಂಪನಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈ ಪೈಕಿ 25 ಪ್ರಕರಣಗಳಲ್ಲಿ ತಲಾ ರೂ.50 ಲಕ್ಷದಂತೆ ಸಂದಾಯ ಮಾಡಿ, ಉಳಿದ 52 ಪ್ರಕರಣಗಳನ್ನು ನ್ಯೂ ಇಂಡಿಯಾ ಅಶುರೆನ್ಸ್ ಕಂಪನಿಯ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. • ಉಳಿದ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಕರೋನಾ ಸೋಂಕಿನಿಂದ ಮೃತಪಟ್ಟ ಕರೋನಾ (Frontline Health worker) ವಾರಿಯರ್ಸ್‌ಗಳ ಕುಟುಂಬ ವರ್ಗದವರು ಈ ವಿಮಾ ಸೌಲಭ್ಯವನ್ನು ಕ್ಲೇಮ್ ಮಾಡಲು ದಾಖಲಾತಿಗಳನ್ನು ಒದಗಿಸಬೇಕಿದ್ದು, ಈ ದಾಖಲಾತಿಗಳನ್ನು ಸಂಬಂಧಪಟ್ಟ ಮೇಲಾಧಿಕಾರಿಗಳು ದೃಢೀಕರಿಸಿದ ನಂತರ ವಿಮಾ ಕಂಪನಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿದೆ. • ಮೃತ ನೌಕರರ ಕುಟುಂಬವರ್ಗದವರಿಂದ ಅಗತ್ಯ ದಾಖಲಾತಿಗಳನ್ನು ಒದಗಿಸಲು ವಿಳಂಬವಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದಾಖಲಾತಿಗಳನ್ನು ಜರೂರಾಗಿ ಒದಗಿಸುವಂತೆ ಸೂಚನೆ ನೀಡಲಾಗಿದೆ. ಬಾಕಿ ಉಳಿದಿರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆಕುಕ 13 ಹೆಚ್‌ಎಸ್‌ಡಿ 2021

(ಡಾ॥ ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ

District Wise Approved Claims - 50 Lakhs per claim	No's
Bagalkot	3
Bangalore	3
Bellary	1
Chitradurga	1
Dakshina Kannada	1
Davangere	2
Gadag	2
Hassan	1
Haveri	2
Kalburgi	3
Mandya	2
Mysore	1
Ramnagar	2
Shivamogga	1
Total	**25**

District Wise - Cases Sent for Approval under PMGKY Scheme	No's
Bagalkot	2
Bangalore	10
Belagavi	5
Bellary	1
Chikkamagaluru	2
Chitradurga	5
Dakshina Kannada	1
Davangere	5
Gadag	2
Hassan	3
Kalburgi	2
Kolar	1
Mandya	1
Mysore	5
Shiavamogga	3
Tumkur	2
Uttara Kannada	1
Vijayapura	1
Total	**52**

District Wise Pending Claims	No's
Bagalkot	1
Bangalore	1
Belagavi	3
Bellary	1
Chikkamagaluru	2
Chitradurga	1
Davangere	1
Dharwad	1
Gadag	1
Haveri	2
Koppal	2
Mandya	1
Mysore	3
Ramangar	1
Shivamogga	1
Tumkur	1
Uttara Kannada	1
Vijayapura	3
Total	**27**

District Wise Claims of Other Departments	No's
Bagalkot	2
Bangalore	13
Belagavi	2
Bellary	1
Kolar	1
Raichur	6
Total	**25**

Summary of Claims Under PMGKY	
Particulars	**No's**
Approved Claims	25
Claims Under Process with Insurance	52
Pending Claims	52
Total	**129**